ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ರಸ್ತೆಯ ವರ್ಗಾವಣೆ

1038 - ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ಎಷ್ಟು ಕಿಲೋಮೀಟರ್ ಉದ್ದದ ರಸ್ತೆಯನ್ನು ವರ್ಗಾಯಿಸಿಕೊಡಲಾಗಿದೆ?

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿದ್ದಾರೆಯೇ?

ಇ) ತೆಗೆದುಕೊಂಡಿದ್ದಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಒಟ್ಟು 143.80 ಕಿ.ಮೀ. ಉದ್ದದ 10 ರಸ್ತೆಗಳನ್ನು ಜುಲೈ 87ರಲ್ಲಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಜುಲೈ 87ರಲ್ಲಿ ವರ್ಗಾಯಿಸಿದೆ.

ಆ) ಹೌದು.

ಇ) ರಸ್ತೆಗಳ ನಿರ್ವಹಣೆಗಾಗಿ ನೀಡಲಾಗುವ ನಿರ್ವಹಣಾ ಅನುದಾನದಲ್ಲಿ ಈ ರಸ್ತೆಗಳ ದುರಸ್ತಿಯನ್ನು ಕೈಗೊಳ್ಳಲಾಗಿದೆ. ಹಾಗೂ ಪ್ರತಿ ಕ್ಷೇತ್ರಕ್ಕೆ ರೂ.12 ಲಕ್ಷ ಕಾಮಗಾರಿಗಳಲ್ಲೂ ಸಹ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಸೆರೆವಾಡ - ಸವಣೂರು ರಸ್ತೆಯ ದುಸ್ಥಿತಿ ಕುರಿತು

1089 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಬರುವ ಸೆರೆವಾಡ - ಸವಣೂರು ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಈ ಗ್ರಾಮಾಂತರ ರಸ್ತೆಯು ನಾದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಒಟ್ಟು 42.5 ಕಿ.ಮೀ ಉದ್ದದಲ್ಲಿ 11.60 ಕಿ.ಮೀ. ಉದ್ದಕ್ಕೆ ಡಾಂಬರಿನ ರಸ್ತೆಯಿದ್ದು ಮತ್ತು 32 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡಲು 1990Ë91ನೇ ಸಾಲಿನಲ್ಲಿ ಮಂಜೂರಾತಿ ಮಾಡಲಾಗಿದೆ. 1 ಕಿ.ಮೀ. ಉದ್ದಕ್ಕೆ ಮರು (ಜಲ್ಲಿ) ಹಾಕುವ ಕಾಮಗಾರಿಯು ಪ್ರಗತಿಯಲ್ಲಿದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ ಈ ರಸ್ತೆಯನ್ನು ನಿರ್ವಹಣೆ ಮಾಡಲಾಗುವುದು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ನೀರಾವರಿ ಇಲಾಖೆಯಲ್ಲಿ ಬರುವ ರಸ್ತೆಗಳ ರಿಪೇರಿ

271 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಹಾಗೂ ಸವದತ್ತಿ ತಾಲ್ಲೂಕಿನ

1) ಇಂಗಳಗಿ ಅನಿಗೋಳ ರಸ್ತೆ.

2) ಮಾಟೊಳ್ಳಿ ಆಪ್ರೋಚ್ ರೋಡ್.

3) ಸುತಗಟ್ಟಿ ಎಣಗಿ ರಸ್ತೆ.

4) ಕೆಂಗಾನೂರ ಗುಡದೂರ ರಸ್ತೆ (ವಾಯಾ ಸಂಗೊಳ್ಳಿ)

5) ಅಮಟೂರ ನಂಗೂನಗರ ರಸ್ತೆಗಳನ್ನು ಖಡಿ ಹಾಕಿ ರಿಪೇರಿ ಮಾಡಲು ಮುಖ್ಯ ಇಂಜಿನಿಯರ್ ಇರಿಗೇಷನ್ ನಾರ್ಥ್ ಬೆಳಗಾವಿ ಇವರು ನವೆಂಬರ್ ಅಥವಾ ಡಿಸೆಂಬರ್ 1988 ರಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಮಲಪ್ರಭಾ ಪ್ರೋಜೆಕ್ಟ್, ನವಿಲು ತೀರ್ಥ ಇವರಿಗೆ ಆದೇಶ ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮುಖ್ಯ ಇಂಜಿನಿಯರ್ ಇವರ ಆದೇಶ ಪ್ರಕಾರ ಸೂಪರಿಟೆಂಡೆಂಟ್ ಇಂಜಿನಿಯರ್ ರವರ ಮಲಪ್ರಭಾ ಪ್ರೋಜೆಕ್ಟ್ ನವಿಲು ತೀರ್ಥ ಇವರು ರಿಪೇರಿ ಮಾಡಲು ಯಾವ ಕ್ರಮ ಕೈಗೊಂಡಿರುವರು?

ಇ) ಈ ಕೆಲಸ ಮುಗಿಸಲು ಇನ್ನು ಎಷ್ಟು ದಶಕಗಳು ಬೇಕು?

ಈ) ಲೋಕೋಪಯೋಗಿ ಸಚಿವರು ಹಾಗೂ ಸೆಕ್ರೆಟರಿ, ಪಿ.ಡಬ್ಲ್ಯೂ.ಡಿ. ಇವರು ರಸ್ತೆ ರಿಪೇರಿ ಮಾಡಲು ಆದೇಶ ನೀಡಿದರೂ ಸಹ ಇನ್ನೂವರೆಗೆ ರಸ್ತೆ ರಿಪೇರಿ ಆಗದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸದರಿ ರಸ್ತೆಗಳ ದುರಸ್ತಿ ಕಾರ್ಯವನ್ನು ಕೂಡಲೇ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಬಂದಿದೆ.

ಆ) ರಸ್ತೆಗಳ ವಾರ್ಷಿಕ ನಿರ್ವಹಣೆಗೆ ಮಾತ್ರ ಮಾಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಹಣದ ಕೊರತೆಯಿಂದಾಗಿ ದುರಸ್ತಿ ಕಾರ್ಯ ಕೈಗೊಳ್ಳಲಾಗಿಲ್ಲ.

ಉ) ರಸ್ತೆಗಳ ನಿರ್ವಹಣೆಗೆ ಒಂದು ಕಿ.ಮೀ. ಗೆ ನಾಲ್ಕು ಸಾವಿರ ರೂಪಾಯಿಗಳಂತೆ ಬರುವ ಅನುದಾನದಲ್ಲಿ ವಿಶೇಷ ದುರಸ್ಥಿ ಮಾಡಲು ಸಾಧ್ಯವಾಗುತ್ತಿಲ್ಲ. ಹೆಚ್ಚಿನ ಅನುದಾನ ಒದಗಿದ ಕೂಡಲೇ ರಸ್ತೆಗಳ ವಿಶೇಷ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಕೆಲವು ತಾಲ್ಲೂಕುಗಳಿಗೆ ಲಿಫ್ಟ್ ಇರಿಗೇಷನ್ ಸ್ಕೀಂ ಅನ್ನು ತೆಗೆದುಕೊಳ್ಳುವ ಬಗ್ಗೆ

272 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ, ವಕ್ಕುಂದ, ದೇವಲಾಪುರ, ಸಂಗೊಳ್ಳಿ ಹಾಗೂ ಸವದತ್ತಿ ತಾಲ್ಲೂಕಿನ ಮಾಟೊಳ್ಳಿಎಣಗಿ ಗ್ರಾಮಗಳ ಮಲಪ್ರಭಾ ಯಾತ ನೀರಾವರಿ ಯೋಜನೆಯ ಅಂತಿಮ ಭಾಗದಲ್ಲಿ ಬರುವ ಹೊಲಗಳಿಗೆ ಸರಿಯಾಗಿ ನೀರು ಸಿಗುತ್ತಿರುವುದಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮುಖ್ಯ ಮಂತ್ರಿಗಳು ಮುಖ್ಯ ಇಂಜಿನಿಯರ್ ಇರಿಗೇಷನ್ ನಾರ್ತ್, ಬೆಳಗಾಂ ಇವರಿಗೆ ಮತ್ತು ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ, ಬೆಂಗಳೂರು ಇವರಿಗೆ ಈ ಕೆಲಸಗಳ ಬಗ್ಗೆ ಸರ್ವೆ ಮಾಡಲು ಎಂದು ಆದೇಶ ಮಾಡಿದ್ದಾರೆ? ಹಾಗಿದ್ದಲ್ಲಿ ಯಾವಾಗ?